# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

S.C.146/2022

C.W.6
P.W. 6

ದಿನಾಂಕಃ 30-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ಃ ಕೃಷ್ಣನಾಯ್ಕ |
| ತಂದೆಯ ಹೆಸರು | ಃ ಲಾಲ್ಯ ನಾಯ್ಕ |
| ವಯಸ್ಸು | ಃ 28 ವರ್ಷ |
| ಉದ್ಯೋಗ | ಃ ಖಾಸಗಿ ಕೆಲಸ |
| ವಾಸ | ಃ ಕಮಲನಾಯಕನತಾಂಡ್ಯ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಸ್ಥಳಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ಪೋಟೋವನ್ನು ತೋರಿಸಲಾಗಿ ಸದರಿ ಪೋಟೋದಲ್ಲಿರುವ ಮನೆಯು ಅರೋಪಿ ರಾಜನಾಯ್ಕ ಮತ್ತು ಮೃತ ರವಿಚಂದ್ರನಾಯ್ಕುನಿಗೆ ಸೇರಿದ ಮನೆಯಾಗಿರುತ್ತದೆ. ಪೊಲೀಸರು ಆ ಮನೆಯ ಬಳಿ ಬಂದು ಸದರಿ ಪೋಟೋ ತೆಗೆದಿರುತ್ತಾರೆ. ಸದರಿ ಪೋಟೋವನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದ್ದು , ಸದರಿ ನಿಪಿ-8 ಮತ್ತು 9 ರಲ್ಲಿ ನನ್ನ

ಭಾವಚಿತ್ರ ವಿರುತ್ತದೆ ಎಂದು ಸಾಕ್ಷಿ ಗುರುತಿಸಿರುತ್ತಾರೆ . ಸದರಿ ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆ .

2) ಕೃತ್ಯ ನಡೆದ ಸ್ಥಳದಿಂದ ಸ್ವಲ್ಪ ದೂರದಲ್ಲಿ ರಾಜನಾಯ್ಕ ಮತ್ತು ಇನ್ನೊಬ್ಬರಿಗೆ ಸೇರಿದ ಮನೆಯ ಅಡಿಪಾಯದಲ್ಲಿ ಊತಿರುವ ಶವವನ್ನು ಜೆ ಸಿ ಬಿ ಯಂತ್ರ ದಿಂದ ಮೃತ ರವಿಚಂದ್ರ ನಾಯ್ಕ ಶವವನ್ನು ತೆಗೆದಿದ್ದು , ಆ ಸಮಯದಲ್ಲಿ ಪೊಲೀಸರು , ವೈದ್ಯರು ಮತ್ತು ತಹಶೀಲ್ದಾರ್ ರರು ಹಾಜರಿದ್ದು ಮತ್ತು ನಾನು ಸಹ ಶವ ತೆಗೆದಿರುವ ದೃಶ್ಯವನ್ನು ನೋಡಿರುತ್ತೇನೆ. ಶವವನ್ನು ಹೊರಗೆ ತೆಗೆದಾಗ ಮೃತ ದೇಹದಮೂಳೆ ಕೊಳೆತ ಮಾಂಸ ವಾಸನೆ ಬರುತ್ತಿದ್ದು, ಅವುಗಳು ಒಂದು ಚಾಪೆ ಅಥವಾ ರಗ್ಗಿನಲ್ಲಿ ಇತ್ತು. ಮೃತ ಶವವನ್ನು ಹೊರಗೆ ತೆಗೆದ ಸಮಯ ಬೆಳಗ್ಗೆ 10 ರಿಂದ 11 ಗಂಟೆಯಾಗಿತ್ತು. ಶವ ತೆಗೆಯುವ ಮುಂಚೆ ಆರೋಪಿತರು ಶವ ಊತಿಟ್ಟ ಸ್ಥಳವನ್ನು ತೋರಿಸುತ್ತಾರೆ. ಮೃತ ರವಿಚಂದ್ರನಾಯ್ಕ 2 ನೇ ಆರೋಪಿಯ ಗಂಡ. ಮೃತ ರವಿಚಂದ್ರನಾಯ್ಕ ಆರೋಪಿ-1 ರವರ ಸಹೋದರ. ಮೃತ ರವಿಚಂದ್ರನಾಯ್ಕನನ್ನು ಯಾವ ಕಾರಣಕ್ಕಾಗಿ ಯಾರು ಕೊಲೆ ಮಾಡಿದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಘಟನೆಯ ಕುರಿತು ನನ್ನನ್ನು ಯಾವುದೇ ವಿಚಾರಣೆ ಮಾಡಿರುವುದಿಲ್ಲ.

3) ತೆರೆದ ನ್ಯಾಯಾಲಯದಲ್ಲಿ ಒಂದು ಸಿಡಿಯನ್ನುಲ್ಯಾಪ್ ಟಾಪ್ ಸಹಾಯದಿಂದ ಆರೋಪಿ ಪರ ವಕೀಲರ ಹಾಗೂ ಅಭಿಯೋಜಕರ ಸಮ್ಮುಖದಲ್ಲಿ ಪ್ರದರ್ಶಿಸಿ

ನೋಡಲಾಗಿ ಸದರಿ ಸಿಡಿಯು ಶವವನ್ನು ಜೆ ಸಿ ಬಿ ಯಂತ್ರದ ಸಹಾಯದಿಂದ ಮೃತನ ಶವವನ್ನು ಹೊರತೆಗೆದ ದೃಶ್ಯವಳಿಗಳು ಆಗಿದ್ದು, ಅದನ್ನು ಸಾಕ್ಷಿ ನೋಡಿ ಶವ ತೆಗೆಯುವ ಸಮಯದಲ್ಲಿ ಹಾಜರಿರುವುದಾಗಿ ಒಪ್ಪಿಕೊಂಡಿರುವುದರಿಂದ ಸದರಿ ಸಿಡಿಯನ್ನು ನಿಪಿ-10 ಎಂದು ಗುರುತಿಸಲಾಯಿತು. ಶವವನ್ನು ಹೊರ ತೆಗೆದ ನಂತರ ಪೊಲೀಸರು ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ.

( ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜನೆಯ ಸಾಕ್ಷಿಗೆ ಭಾಗಶಃ ಪ್ರತಿಕೂಲ ಸಾಕ್ಷಿಯನ್ನು ನುಡಿಯುತ್ತಿರುವುದರಿಂದ ಮಾನ್ಯ ಪಿ ಪಿ ರವರು ಪಾಟೀ ಸವಾಲಿಗೆ ಅನುಮತಿಯನ್ನು ಕೋರಿದ್ದು, ಪಾಟೀ ಸವಾಲಿಗೆ ಅನುಮತಿಸಲಾಯಿತು.)

ಪಾಟೀ ಸವಾಲು ಮಾನ್ಯ ಪಿ.ಪಿ. ರವರಿಂದಃ-

4) ಪೊಲೀಸರು ನನ್ನನ್ನು ಕೊಲೆಯಾದ ಸ್ಥಳಕ್ಕೆ ಮಹಜರ್ ಮಾಡಲು ಕರೆಸಿದ್ದರು ಅಂದರೆ ಸರಿ. ಪೊಲೀಸರು ನನ್ನ ಸಮಕ್ಷಮದಲ್ಲಿ ರವಿಚಂದ್ರನಾಯ್ಕನ ಮನೆಯಲ್ಲಿ ಕೊಲೆಯಾದ ಸ್ಥಳದಲ್ಲಿ ನಮ್ಮ ಭಾವಚಿತ್ರ ಗಳನ್ನು ತೆಗೆದಿರುತ್ತಾರೆ ಅಂದರೆ ಸರಿಯಲ್ಲ. ಮಹಜರ್ ಮಾಡುವ ಸಮಯದಲ್ಲಿ ಚಾಸಾ-5 ರವರು ಸಹ ಹಾಜರಿದ್ದರು ಅಂದರೆ ಸರಿ. ಸದರಿ ಸಮಯದಲ್ಲಿ ಪಿರ್ಯಾದಿ ಸಹ ಹಾಜರಿದ್ದರು ಅಂದರೆ ಸರಿ . ಸದರಿ ಪಂಚನಾಮೆ ಮಾಡುವಾಗ ಸಂಜೆ 4 ರಿಂದ 5 ಗಂಟೆಯಾಗಿತ್ತು. ಪೊಲೀಸರು ಕೊಲೆಯಾದ ಸ್ಥಳಗಳಲ್ಲಿ ನನ್ನ ಭಾವಚಿತ್ರ ಗಳನ್ನು ತೆಗೆದಿರುತ್ತಾರೆ ಅಂದರೆ ಸರಿ . ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಶವವನ್ನು ಹೊರಗೆ ತೆಗೆದ ನಂತರ ಸ್ಥಳದಲ್ಲಿ ಪೊಲೀಸರು ಶವಪಂಚನಾಮೆ ಮಾಡಿರುತ್ತಾರೆ ಅಂದರೆ ಸರಿ. ಶವಪಂಚನಾಮೆಯ

ಕಾಲದಲ್ಲಿ ಪೊಲೀಸರು ವಿಡಿಯೋ ಮಾಡಿಸಿರುತ್ತಾರೆ ಅಂದರೆ ಸರಿ. ನಾನು ಪೊಲೀಸರ ಮುಂದೆ ಶವಪಂಚನಾಮೆಯ ಕಾಲದಲ್ಲಿ ಹೇಳಿಕೆಯನ್ನು ಕೊಟ್ಟಿರುತ್ತೇನೆ. ನಾನು ಪೂಲೀಸರಿಗೆ ಆರೋಪಿ -1 ಮತ್ತು 2 ರವರು ಸೇರಿ ಕೊಲೆ ಮಾಡಿದ ವಿಷಯವನ್ನು ನಾನು ಹೇಳಿದ್ದೇನೆ ಅಂದರೆ ಸರಿಯಲ್ಲ . ಆರೋಪಿತರು ನನಗೆ ಸಂಬಂಧಿಕರು ಆಗಿರಬೇಕಾದರ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ . ಆರೋಪಿ-1 ಮತ್ತು 2 ರವರ ಮಧ್ಯೆ ಅನೈತಿಕ ಸಂಬಂದವಿದ್ದು ಆ ಕಾರಣದಿಂದ ರವಿಚಂದ್ರನಾಯ್ಕನನ್ನು ಕೊಲೆ ಮಾಡಿದ್ದಾರೆಂದು ಪೊಲೀಸರ ಮುಂದೆ ಹೇಳಿದ್ದೇನೆ ಅಂದರೆ ಸರಿ. ಶವಪಂಚನಾಮೆಯನ್ನು ನಿಪಿ-11 ಎಂದು, ಕಾಲಂ ನಂ.10 ರಲ್ಲಿ ಹೇಳಿರುವ ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ನಾನು ಶವಪಂಚನಾಮೆಯನ್ನು ತಹಶೀಲ್ದಾರ್ ಮಾಡುವ ಸಮಯದಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ ಅಂದರೆ ಸರಿ.

<u>ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಸಿಡಿಜೆಡ್ ವಕೀಲರಿಂದಃ</u>

5) ನಿಪಿ-2 ಕ್ಕೆ ಊರಲ್ಲಿ ಸಹಿ ಮಾಡಿದ್ದೇನೆ, ಆದರೆ ಎಲ್ಲಿ ಸಹಿ ಮಾಡಿದ್ದೇನೆಂದು ನನಗೆ ಗೊತ್ತಿಲ್ಲ. ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಈಗ ನ್ಯಾಯಾಲಯದಲ್ಲಿ ಪ್ರದರ್ಶಿಸಿದ ಸಿಡಿಯಲ್ಲಿರುವ ದೃಶ್ಯವಳಿಗಳನ್ನು ವಿಕ್ಷೀಸಿರುತ್ತೇನೆ. ಸದರಿ ಸಿಡಿಯನ್ನು ವಿಕ್ಷೀಸಿದಾಗ ಜೆ ಸಿ ಬಿ ಅಪರೇಟರ್ ಗೆ ಸುಮಾರು 5-6 ಜನ ಅಲ್ಲಿ ಇಲ್ಲಿ ತೆಗೆ ಎಂದು ಹೇಳುತ್ತಿದ್ದರು ಅಂದರೆ ಸರಿ. ಸದರಿ

ಜೆ ಸಿ ಬಿ ಯಲ್ಲಿ ಪಾಯದ ಮೇಲಿನ ಮಣ್ಣಿನ ಗುಡ್ಡೆ ಇತ್ತು , ಆ ಜಾಗದಲ್ಲಿ ಮಣ್ಣನ್ನು ತೆಗೆಯುತ್ತಿದ್ದರು ಅಂದರೆ ಸರಿ. ಈಗ ವೀಕ್ಷಣೆ ಮಾಡಿದ ಸಿಡಿಯಲ್ಲಿ ಪಾಯವಿರುವುದಿಲ್ಲ. ಸಾಕ್ಷಿ ಮುಂದುವರೆದು ಆದರೆ ಪಾಯ ಇರುತ್ತದೆ ಎಂದು ಹೇಳಿರುತ್ತಾರೆ. ಈಗ ನೋಡಿದ ಸಿಡಿಯಲ್ಲಿ ಆರೋಪಿಗಳು ನಿಂತಿರುತ್ತಾರೆ . ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವಂತೆ ಆರೋಪಿತರು ಸ್ಥಳವನ್ನು ತೋರಿಸಿರುವುದಿಲ್ಲ ಅಂದರೆ ಸರಿಯಲ್ಲ. ಪಿರ್ಯಾದಿ ಮತ್ತು ಆರೋಪಿತರಿಗೆ ಆಸ್ತಿಯ ವಿಚಾರದಲ್ಲಿ ಮನಸ್ತಾಪವಿತ್ತು ಅಂದರೆ ನನಗೆ ಗೊತ್ತಿಲ್ಲ . ಸದರಿ ಸ್ಥಳದಲ್ಲಿ ಹೆಚ್ಚು ಜನರು ಸೇರಿದ್ದರು ಅಂದರೆ ಸರಿ. ಫ್ರಾಸಾ-1 ರವರು ಪೊಲೀಸರಿಗೆ ಮತ್ತು ತಹಶೀಲ್ದಾರ್ ರವರಿಗೆ ಇದೇ ಸ್ಥಳವೆಂದು ತೋರಿಸಿದ ಎಂಬ ಪ್ರಶ್ನೇಗೆ ಸಾಕ್ಷಿಯು ನಾನು ಜನಗಳ ಮಧ್ಯೆ ಇದ್ದ ಕಾರಣ ಅದನ್ನು ಗಮನಿಸಿರುವುದಿಲ್ಲ . ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ ಪರ ಃ-</u>

6) ನನಗೂ ಮತ್ತು ಪಿರ್ಯಾದಿದಾರರಿಗೆ ಪರಿಚಯಸ್ಥರು ಅಂದರೆ ಸರಿ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ ಏನು ಬರೆದಿದೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ, ಪೊಲೀಸರು ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿರುತ್ತೇನೆ . ನಾನು ಬೆಳಗ್ಗೆ ಡಾಬಕ್ಕೆ ಹೋಗಿ ಸಂಜೆಯವರಿಗೆ ಇದ್ದರೆ ಮಾತ್ರ ಕೂಲಿ ಕೊಡುತ್ತಾರೆ ಅಂದರೆ ಸರಿ . ಪೊಲೀಸರು ನನ್ನನ್ನು ಸ್ಥಳಮಹಜರ್ ಗೆ ಕರೆಸಿಕೊಂಡಿರಲಿಲ್ಲ ಅಂದರೆ ಸರಿಯಲ್ಲ.

ಫೋಟೋ ತೆಗೆಸಿಕೊಂಡ ವಿಚಾರ ಬಿಟ್ಟರೆ ನನಗೆ ಬೇರೆ ಏನೂ ಗೊತ್ತಿಲ್ಲ .

- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು